ಬುಧವಾರ
28/05/2025
ಸ್ನೇಹಯಾನ



ಡಾ.ಚಂದ್ರಶೇಖರ ದಾಮ್ಲೆ

WWW.THERURALMIRROR.COM
ದ ರೂರಲ್ ಮಿರರ್.ಕಾಂ
Constructive Media

# ಇದೆಲ್ಲಾ ಹೇಗಾಗ್ತದೆ? ಇದು ನಮ್ಗೆಲ್ಲಿ ಗೊತ್ತಾಗ್ತದೆ!?

ಗ್ರಾಮ ಪಂಚಾಯತುಗಳ ಕಚೇರಿಗಳಿಗೆ ನೀವು "ಹೀಗೇ ಸುಮ್ಮನೇ" ಎಂತ ಹೋಗುವುದಿದೆಯೇ? ಗ್ರಾಮ ಲೆಕ್ಕಾಧಿಕಾರಿಗಳೊಡನೆ ಉಭಯಕುಶಲೋಪರಿ ಮಾತಾಡುತ್ತ ಅಭಿವೃದ್ಧಿ ಯೋಜನೆಗಳ ಬಗ್ಗೆ ತಿಳಿದುಕೊಳ್ಳುವ ಕ್ರಮ ಇದೆಯೆ? ಅವರು ಹಳ್ಳಿಗರೊಡನೆ ಪಂಚಾಯತ್‌ನ ಆದಾಯ ವೆಚ್ಚಗಳ ವಿವರಗಳನ್ನು ಅಥವಾ ತಲೆಬಿಸಿಗಳನ್ನು ಹಂಚಿಕೊಳ್ಳುತ್ತಾರೆಯೆ? ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಸದಸ್ಯರು ಜನಸಾಮಾನ್ಯರಿಗೆ ಸೌಹಾರ್ದ ಭೇಟಿ ನೀಡುತ್ತಾರೆಯೆ? ಪಂಚಾಯತು ವಿಧಿಸುವ ವಿವಿಧ ಕರಗಳ ಬಗ್ಗೆ ನಿಮಗೆ ಅರಿವಿದೆಯೆ? ನಿಮ್ಮ ಪಂಚಾಯತುಗಳಿಗೆ ಸರಕಾರದಿಂದ ಬರುವ ಅನುದಾನಗಳ ಬಗ್ಗೆ ಸಮುದಾಯದಲ್ಲಿ ಚರ್ಚೆಯಾಗುತ್ತಿದೆಯೆ? ಅವುಗಳ ವೆಚ್ಚಗಳ ಮೌಲ್ಯಮಾಪನದಲ್ಲಿ ಜನಾಭಿಪ್ರಾಯಕ್ಕೆ ಅವಕಾಶವಿದೆಯೆ? ನಿಜವಾದ ಪ್ರಜಾಪ್ರಭುತ್ವದ ಬೀಜಗಳು ಮೊಳೆಯುವುದು ಇಲ್ಲಿಯೇ? ಅಂತಹ ಸಾಧ್ಯತೆಗಳ ನಿರೀಕ್ಷೆ ಇಟ್ಟುಕೊಳ್ಳಬಹುದೇ? ಆದರೆ ಅದು ಅಸಾಧ್ಯವೆಂದು ದಿ-ಫೈಲ್ ಮಾಹಿತಿ ಹಕ್ಕಿನ ಆಧಾರದಲ್ಲಿ ಪ್ರಕಟಿಸಿದ ವರದಿಗಳಿಂದ ಅರ್ಥವಾಗುತ್ತದೆ.

The-File ಎಂಬ ವೆಬ್ ಪತ್ರಿಕೆಯಲ್ಲಿ ವರದಿಗಾರರಾಗಿರುವ ಮಹಾಂತೇಶ್ ಭದ್ರಾವತಿಯವರು ಸೂಕ್ತ ದಾಖಲೆಗಳನ್ನು ಸಂಗ್ರಹಿಸಿ ಫೇಸ್‌ಬುಕ್‌ನಲ್ಲಿ ಮಾಡುತ್ತಿರುವ ವರದಿಗಳು ನಿಜಕ್ಕೂ ಆಘಾತಕಾರಿಯಾಗಿವೆ. ಆದರೆ ಯಾರೂ ಆಘಾತಕ್ಕೊಳಗಾಗುತ್ತಿಲ್ಲ ಎಂಬುದು ವಿಚಿತ್ರ ಆದರೂ ನಿಜ. ಈ ವರದಿಗಳಲ್ಲಿ ನೇರವಾಗಿ ಆರೋಪಕ್ಕೊಳಗಾದ ರಾಜಕಾರಣಿಗಳಾಗಲೀ ಅಧಿಕಾರಿಗಳಾಗಲೀ ಯಾವುದೇ ಗಾಬರಿಗೆ ಒಳಗಾಗುವುದಿಲ್ಲ. ಇನ್ನು ವಾಸ್ತವಿಕ ನಷ್ಟಕ್ಕೆ ಒಳಗಾಗುವ ತೆರಿಗೆದಾರರೂ ಚಿಂತಿಸುವುದಿಲ್ಲ. ಮಹಾಂತೇಶರ ವರದಿಗಳಿಗೆ ಹೆಚ್ಚಿನ ಲೈಕ್‌ಗಳಿಲ್ಲ, ಕಮೆಂಟ್‌ಗಳು ಇನ್ನೂ ಕಡಿಮೆ. ಕೆಲವೊಮ್ಮೆ ಶೇರ್ ಗಳು ಹೆಚ್ಚಿರುತ್ತವೆ. ಆದರೆ ನಾನಂತೂ ಬಹಳ ದಿನಗಳಿಂದ ಅವರ ವರದಿಗಳನ್ನು ಗಮನಿಸುತ್ತಿದ್ದೇನೆ. ಅವುಗಳು ಮುಂದಿಡುವ ಅವ್ಯವಹಾರ, ಲಂಚ, ಸ್ವಜನ ಪಕ್ಷಪಾತ, ಕಾನೂನಿನ ಉಲ್ಲಂಘನೆ ಮುಂತಾದ ಪ್ರಕರಣಗಳಲ್ಲಿ ಭಾಗಿಯಾದ ತಪ್ಪಿತಸ್ಥರು ತಮ್ಮ ಅಕ್ರಮಗಳು ಬಹಿರಂಗವಾದ ಬಗ್ಗೆ ಯಾವುದೇ ನಾಚಿಕೆ ತಾಳದಿರುವುದನ್ನು ನೋಡಿದರೆ "ಇದೆಲ್ಲಾ ಹೇಗಾಗ್ತದೆ?" ಎಂಬ ಪ್ರಶ್ನೆ ಮೂಡುತ್ತದೆ.

ಯಾರೇ ಅಧಿಕಾರಿಗಳ ಅಥವಾ ರಾಜಕಾರಣಿಗಳ ಭ್ರಷ್ಟಾಚಾರ ಬಹಿರಂಗವಾದಾಗ ಕಚೇರಿಗಳ ಒಳಗೆ ನಡೆದ ನಿರ್ಧಾರಗಳ ಹಾಗೂ ಅನುಮತಿ ಪತ್ರಗಳ ದಾಖಲೆಗಳ ಫೋಟೋಗಳು ಮಹಾಂತೇಶ್‌ರವರ ಕಮೆಂಟ್ ಬಾಕ್ಸ್ ನಲ್ಲಿರುತ್ತವೆ. ಬಹುಕೋಟಿ ಹಣವನ್ನು ಲಪಟಾಯಿಸಿದ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಣಕಾಸು ವಂಚನೆಗಳನ್ನು ಅವರು ಬಹಿರಂಗಪಡಿಸಿದ್ದಾರೆ. ಒಬ್ಬ ಅಧಿಕಾರಿಯ ಆತ್ಮಹತ್ಯೆಗೂ ಕಾರಣವಾದ ಈ ಹಗರಣದಲ್ಲಿ ಹೆಸರು ತಳಕು



ಹಾಕಿಕೊಂಡಿದ್ದ ಸಚಿವರು ರಾಜೀನಾಮೆ ನೀಡುವಲ್ಲಿಯ ತನಕ ಈ ಪ್ರಕರಣ ಮುಂದುವರಿದರೂ ನೈತಿಕ ಹೊಣೆ ಹೊರುವ ರಾಜಕಾರಣಿಗಳು ಮುಂದೆ ಬಾರದಿರುವುದು ಬಹುಮತದ ಪ್ರಜಾರಾಜಕಾರಣದ ದೌರ್ಬಲ್ಯವಾಗಿದೆ. ಮೂಡಾ ಹಗರಣವೆಂದೇ ಪ್ರಸಿದ್ಧವಾದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಭಾರೀ ಅಕ್ರಮದ ವಿವರಗಳ ದಾಖಲೆಗಳೂ ಬಹಿರಂಗಗೊಂಡಿವೆ. ಇಂತಹ ಅಂತರ್ಗತ ತನಿಖಾ ದಾಖಲೆಗಳ ಹೊರತಾಗಿ ಈ ಅಕ್ರಮದ ಸ್ವರೂಪವೇ ನಮಗೆ ಅರ್ಥವಾಗುವುದಿಲ್ಲ. ಮುಖ್ಯಮಂತ್ರಿಗಳೂ ಸೇರಿದಂತೆ ಭೂ ಅವ್ಯವಹಾರದಲ್ಲಿ ತಪ್ಪು ನಡೆದಿದೆ ಹಾಗೂ ನಡೆದಿಲ್ಲವೆಂಬ ವಾರ್ತೆಗಳು ಜನರನ್ನು ಗೊಂದಲಕ್ಕೀಡುಮಾಡುತ್ತವೆ. ಈ ಪ್ರಕರಣದ ಹೋರಾಟವು ಕೋರ್ಟ್‌ನಲ್ಲೇ ನಡೆಯುತ್ತಿದ್ದು ಇದರ ಕೊನೆ ಹೇಗಾಗ್ತದೆ ಎಂಬ ಅಚ್ಚರಿ ಉಳಿಯುತ್ತದೆ ಅಷ್ಟೇ ಹೊರತು ತಪ್ಪಿತಸ್ಥರಾಗಿ ಯಾರೂ ಅಧಿಕಾರ ಬಿಡುವುದಿಲ್ಲ.

ರಾಜ್ಯದ ಶಕ್ತಿ ಕೇಂದ್ರವಾದ ವಿಧಾನ ಸಭೆಯಲ್ಲಿ ಶಾಸಕರೂ ರಾಜಕಾರಣಿಗಳೂ ಇರುತ್ತಾರೆ. ಅವರ ಖರ್ಚು ವೆಚ್ಚಗಳ ಬಿಲ್ ಗಳ ಪರಿಶೀಲನೆ ಮತ್ತು ಅನುಮೋದನೆಗಳು ಎಲ್ಲಿ ಹಾಗೂ ಹೇಗೆ ನಡೆಯುತ್ತವೆಂದು ನಮಗೆ ಹೇಗೆ ತಿಳಿಯಲು ಸಾಧ್ಯ. ಆದರೆ ದಿ-ಫೈಲ್ ವರದಿಯ ಪ್ರಕಾರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಸಿ.ಬಿ.ಐ. ತನಿಖೆಯನ್ನು ರದ್ದು ಪಡಿಸಲು ಉನ್ನತ ಕೋರ್ಟ್ ಗಳಲ್ಲಿ ವಾದ ಮಾಡಿದ ಹಿರಿಯ ವಕೀಲ ಅವರು 2.80 ಕೋಟಿ ರೂ.ಗಳ ಸಂಭಾವನೆಯನ್ನು ಸರಕಾರದಿಂದ ಕೋರಿದ್ದಾರೆ. ಈ ಮೊದಲು ಮೂಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರ ವಾದಿಸಿದ ಬಾಬ್ತು 1.49 ಕೋಟಿ ರೂ ಗಳ ಸಂಭಾವನೆಯನ್ನು ಬಯಸಿದ್ದರು. ಈ ಬಯಕೆಗಳೆಲ್ಲವೂ ಸೂಕ್ತ ಅಧಿಕಾರಿಗಳು ಸೂಕ್ತ ಕಾರಣಗಳೊಂದಿಗೆ ಶಿಫಾರಸು ಮಾಡಿ ನೀಡಲಾಗುತ್ತದೆ. ಹೀಗೆಯೇ 'ಸಿದ್ಧಾರ್ಥ' ಹೆಸರಿನಲ್ಲಿ ಪ್ರಭಾವಿ ರಾಜಕೀಯ ಕುಟುಂಬಗಳು ಟ್ರಸ್ಟ್, ಸೊಸೈಟಿಗಳನ್ನು ಸ್ಥಾಪಿಸಿ ಸರಕಾರದಿಂದ ಕೊಟ್ಯಾಂತರ ಹಣ, ಜಮಿನು ಮತ್ತು ನಿವೇಶನಗಳನ್ನು ಮಂಜೂರು ಮಾಡಿಸಿಕೊಂಡ ಉದಾಹರಣೆಯೂ ದಿ-ಫೈಲ್ ನಲ್ಲಿ ಪ್ರಕಟವಾಗಿದೆ. ಇದರಲ್ಲಿ ಗೃಹಸಚಿವ ಪರಮೇಶ್ವರ ಒಡೆತನದ ಸಿದ್ಧಾರ್ಥ ಸಂಸ್ಥೆಗಳ ಹೆಸರು ಬಯಲಾಗಿದೆ. ಅಂತೆಯೇ ಕಲಬುರ್ಗಿಯಲ್ಲಿ ಸನ್ಮಾನ್ಯ ಖರ್ಗೆ ಕುಟುಂಬದವರ ಸೊಸೈಟಿಗೆ ಅನುದಾನ ಲಭ್ಯವಿಲ್ಲದಿದ್ದರೂ ಎರಡು ವರ್ಷಗಳಲ್ಲಿ 9.9 ಕೋಟಿ ಹಣ ಮಂಜೂರು ಮಾಡಿದ ದಾಖಲೆಗಳನ್ನು ದಿ.ಫೈಲ್ ಪ್ರಕಟಿಸಿದೆ.

ಇತ್ತೀಚೆಗೆ ದಿ-ಫೈಲ್ ಬಹಿರಂಗ ಗೊಳಿಸಿದ ಒಂದು ವರದಿಯು ಪ್ರಜಾಪ್ರಭುತ್ವದ ಬುಡಕ್ಕೇ ಲಗ್ಗೆ ಇಟ್ಟಿದೆ. ಈ ಹಿಂದಿನ ಬಿ.ಜೆ.ಪಿ. ಆಡಳಿತ ಅವಧಿಯಲ್ಲಿ 29 ಜಿಲ್ಲೆಗಳಲ್ಲಿನ 1930 ಪಂಚಾಯ್ತಿಗಳಲ್ಲಿ 356.65 ಕೋಟಿ ರು. ವೆಚ್ಚಕ್ಕೆ ಪೂರಕ ಬಿಲ್‌ಗಳೇ ಇಲ್ಲದೆ ಹಣ ದುರ್ಬಳಕೆ ನಡೆದಿದೆ. ಅಂದರೆ ಭ್ರಷ್ಟಾಚಾರದ ರೋಗ ತಳಮಟ್ಟದಲ್ಲೂ ಉಲ್ಬಣಗೊಂಡಿದೆ ಎಂದಾಯ್ತು. ಪಂಚಾಯತುಗಳಲ್ಲಿಯೂ ಕೋಟಿಗಳ ಲೆಕ್ಕದಲ್ಲಿ ಸಾರ್ವಜನಿಕ ಬೊಕ್ಕಸಕ್ಕೆ ವಂಚನೆ ನಡೆಯುತ್ತದೆಂದರೆ ಭ್ರಷ್ಟಾಚಾರವು ಕೇನ್ಸರ್‌ನಂತೆ ವ್ಯಾಪಿಸಿದ್ದೆ ಎಂಬುದು ನಮಗೆ ಗೊತ್ತಾಗ್ತಿದೆಯೇ? ಇದು ಪಂಚಾಯಿತಿಗಳ ಆಡಳಿತ ಹೇಗಿದೆ ಎಂಬುದಕ್ಕೆ ಒಂದು ಜ್ವಲಂತ ನಿದರ್ಶನ ಇಲ್ಲಿದೆ. ಹಿಂದಿನ ಬಿ.ಜೆ.ಪಿ ಆಡಳಿತದಲ್ಲಿ ನಡೆದ ಈ ನಿರ್ಲಕ್ಷ್ಯದ ವರದಿಯನ್ನು ರಾಜ್ಯ ಲೆಕ್ಕಪತ್ರ ಪರಿಶೋಧನಾ ಇಲಾಖೆಯೇ ನೀಡಿದ್ದರೂ ಕಾಂಗ್ರೆಸ್ ಸರಕಾರವು ಮೌನವಹಿಸಿರುವುದು ಒಂದು ಸೋಜಿಗವಾಗಿದೆ ಎನ್ನುತ್ತದೆ ದಿ-ಫೈಲ್ ವರದಿ

ಸಂಪೂರ್ಣ ಓದಿಗೆ....
www.theruralmirror.com ಕ್ಲಿಕ್ ಮಾಡಿರಿ ಅಥವಾ ಇಲ್ಲಿ Scan ಮಾಡಿರಿ

ನಮ್ಮ ಚಾನೆಲ್ ಫಾಲೋ ಮಾಡಲು